# ಇಷ್ಟದ ಕೆಲಸದಲ್ಲಿ ದಿನವೆಲ್ಲ ದುಡಿದರೂ ದಣಿವಾಗದು

ಮೆಕಾನಿಕಲ್ ಎಂಜಿನಿಯರ್ ಆಗಿ ಲಕ್ಷಾಂತರ ರೂಪಾಯಿ ಸಂಬಳ ಪಡೆಯುತ್ತಿದ್ದ ವೀರೇಶ್, ಉದ್ಯೋಗ ಬಿಟ್ಟು ನಿರುದ್ಯೋಗಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದಾರೆ; ಗ್ರಾಮೀಣ ಯುವಜನರ ಡಿಜಿಟಲ್ ಕನಸುಗಳಿಗೆ ಕಾವು ನೀಡುತ್ತಿದ್ದಾರೆ. 'ಸುಧಾ'ಕ್ಕೆ ನೀಡಿದ ಸಂದರ್ಶನದಲ್ಲಿ ವೀರೇಶ್ ತಮ್ಮ ಚಟುವಟಿಕೆಗಳನ್ನು ಹಂಚಿಕೊಂಡಿದ್ದಾರೆ.

■ ರಾಘವೇಂದ್ರ ಕೆ. ತೊಗರ್ಸಿ

◆ ನಿಮ್ಮ ಕುಟುಂಬದ ಹಿನ್ನೆಲೆ ಏನು?

ವೀರೇಶ್ ಬಸವರಾಜ್ ಹಳ್ಳಿ ನನ್ನ ಪೂರ್ಣ ಹೆಸರು. ವಿಜಯಪುರ ನಮ್ಮೂರು. ನಮ್ಮ ಪೋಷಕರು 70 ವರ್ಷಗಳಿಂದ ಟೈಲರಿಂಗ್ ಮಾಡುತ್ತಿದ್ದಾರೆ. ಅವಿಭಕ್ತ ಕುಟುಂಬದಲ್ಲಿ ಬೆಳೆದಿದ್ದೇನೆ. ಆಗ ನಮ್ಮ ಮನೆಯಲ್ಲಿ 50 ಮಂದಿ ಇದ್ದೆವು. ಬಾಲ್ಯದಲ್ಲೇ ಕುಟುಂಬದ ಮೌಲ್ಯಗಳ ಮಹತ್ವ ಅರಿತೆ. ನಮ್ಮ ಮನೆಯ ಮಹಿಳೆಯರೆಲ್ಲ ಗೃಹಿಣಿಯರು. ಹೊರಗೆ ಹೋಗಿ ದುಡಿಯುವವರಿಗೆ ಅವರು ತೋರುವ ಕಕ್ಕುಲಾತಿ, ಹೆಚ್ಚುಗಾರಿಕೆ ಗೊತ್ತಾಗಿತ್ತು. ಚಿಕ್ಕಪ್ಪ ಡಿಪ್ಲೊಮಾ ಮಾಡಿದ್ದರು. ಅವರೇ ನಮ್ಮ ಮನೆಯಲ್ಲಿ ಹೆಚ್ಚು ಓದಿದವರು. ನಾನು ಎಂಜಿನಿಯರಿಂಗ್ ಸೇರಿದೆ. ಆ ಓದು ಇಷ್ಟ ಆಗಲಿಲ್ಲ. ಚಿತ್ರಕಲೆಯಲ್ಲಿ ಆಸಕ್ತಿ ಇತ್ತು. ಮೊದಲ ವರ್ಷ ಫೇಲ್ ಆದೆ. ಆಗ ತೋಟದಲ್ಲಿ ಕೆಲಸ ಮಾಡಿ ಹಾಲು ಮಾರುತ್ತಿದ್ದೆ. ಅಂಗಿ ಹೊಲಿಯುವುದನ್ನೂ ಕಲಿತೆ. ಕೆಲಸದಲ್ಲಿ ಯಾವುದೂ ದೊಡ್ಡದಲ್ಲ, ಚಿಕ್ಕದೂ ಅಲ್ಲ. ಅದನ್ನು ಗೌರವದಿಂದ ಮಾಡಬೇಕು ಎಂದು ಕಲಿತೆ.

ನಮ್ಮ ಮನೆತನದ ಅಡ್ಡ ಹೆಸರು ಹಳ್ಳಿ, ನೆಲೆಸಿದ್ದು ವಿಜಯಪುರ ಪಟ್ಟಣದಲ್ಲಿ. ಏಳು ದಶಕಗಳ ದರ್ಜಿ ಉದ್ಯಮ ಇದ್ದರೂ ಆರ್ಥಿಕವಾಗಿ ಸಂಕಷ್ಟದಲ್ಲಿದ್ದೆವು. ಬಾಡಿಗೆ ಮನೆಯಲ್ಲಿದ್ದ ನಮಗೆ ಬಾಡಿಗೆ ಕಟ್ಟಲು ಆಗದೆ ಮೂರ್ನಾಲ್ಕು ತಿಂಗಳಿಗೂ ಮನೆ ಬದಲಿಸುತ್ತಿದ್ದೆವು. ನಮ್ಮ ಪೋಷಕರ ಪರಿಶ್ರಮದಿಂದ ಕುಟುಂಬ ಸುಧಾರಿತ ಸ್ಥಿತಿಗೆ ಬಂದಿದೆ.

◆ ಆಸಕ್ತಿ ಇಲ್ಲದಿದ್ದರೂ ಎಂಜಿನಿಯರಿಂಗ್ ಮಾಡಿ, 'ಕರಿಯರ್ ಕೋಚ್' ಆಗಿದ್ದು ಹೇಗೆ?

ಶಿಕ್ಷಣಕ್ಕೆ ಸಂಬಂಧಿಸಿದಂತೆ ನನಗೆ ಸೂಕ್ತ ಮಾರ್ಗದರ್ಶನ ಸಿಗಲಿಲ್ಲ. ಉದ್ಯೋಗಕ್ಕೆ ಬಂದ ನಂತರ ನನ್ನ ಜೀವನ ಇದಲ್ಲ ಎಂದು ಗೊತ್ತಾಯಿತು. ಶ್ರಮಜೀವಿಯಾಗಿದ್ದರಿಂದ ಕೆಲಸಕ್ಕೆ ಸೇರಿ ನಾಲ್ಕೇ ವರ್ಷದಲ್ಲಿ ಉನ್ನತ ಸ್ಥಾನಕ್ಕೆ ಬಂದಿದ್ದೆ. ಮೊದಲು ಫೇಲಾಗಿದ್ದರೂ ಕ್ಯಾಂಪಸ್ ಸಂದರ್ಶನದಲ್ಲೇ ಕೆಲಸ ಸಿಕ್ಕಿತ್ತು. ಲಕ್ಷ ರೂಪಾಯಿ ಸಂಬಳ ಬಂದರೂ ಸಮಾಧಾನ ಇರಲಿಲ್ಲ. ಜೀವನ ನಿರ್ವಹಣೆಯ ಅನಿವಾರ್ಯಕ್ಕೆ ಕೆಲಸ ಮಾಡುತ್ತಿದ್ದೆ. ಸೋಮವಾರ ಬೆಳಿಗ್ಗೆ ಕಚೇರಿಗೆ ಹೋಗಬೇಕಲ್ಲಾ ಎಂದು ಗೊಣಗುತ್ತಲೇ ಏಳುತ್ತಿದ್ದೆ. ನಮ್ಮೂರಿಗೆ ಹೋದಾಗ ನಮ್ಮ ಕಾಲೇಜಿಗೆ ಹೋಗಿ ನನ್ನ ಅನುಭವವನ್ನು ಹಂಚಿಕೊಳ್ಳುತ್ತಿದ್ದೆ. ಅದಕ್ಕಾಗಿ ವ್ಯವಸ್ಥಿತ ಮಾರ್ಗವನ್ನು ರೂಪಿಸಿಕೊಳ್ಳಬೇಕು ಎಂದು ಈ ಬಗ್ಗೆ ತರಬೇತಿ–ಕಾರ್ಯಾಗಾರದಲ್ಲಿ ತೊಡಗಿದೆ.

ನಾನು ಉದ್ಯಮ ಸಂಬಂಧಿ ಕ್ಷೇತ್ರದಲ್ಲಿ ಕೆಲಸ ಮಾಡಿದ್ದರಿಂದ ಐದುನೂರಕ್ಕೂ ಹೆಚ್ಚಿನ ಕಂಪನಿಗಳಿಗೆ ಭೇಟಿ ನೀಡಿರುವೆ. ಯಾವ ಯಾವ ಕಂಪನಿಗಳಲ್ಲಿ ಏನೇನು ಕೆಲಸ ನಡೆಯುತ್ತದೆ; ಅಲ್ಲಿ ಯಾವ ಬಗೆಯ ವಿಭಾಗಗಳಿವೆ; ಅಲ್ಲಿ ಕೆಲಸ ಮಾಡುವವರ ಸ್ವಭಾವ – ಇದೆಲ್ಲ ಗೊತ್ತಾಗುತ್ತಿತ್ತು. ಕೆಲವರಲ್ಲಿ ಖುಷಿ ಕಾಣುತ್ತಿರಲಿಲ್ಲ. ಅವರಿಗೆ ಖುಷಿಯ ಕೆಲಸವನ್ನು ಕೊಡುವುದು ಹೇಗೆ ಎನ್ನುವುದನ್ನು ಹುಡುಕಲು 'ಕರಿಯರ್ ಕೋಚಿಂಗ್' ಆರಂಭಿಸಿದೆ.



ವೀರೇಶ್ ಬಸವರಾಜ್

◆ ಗೃಹಿಣಿಯರ ಸಂಪಾದನೆಯ ಸಾಧ್ಯತೆಯ ಯೋಚನೆ ಬಂದಿದ್ದು ಹೇಗೆ?

ಗೃಹಿಣಿಯರ ಆರ್ಥಿಕ ಸ್ವಾವಲಂಬನೆ ಬಗ್ಗೆ ಬಾಲ್ಯದಲ್ಲೇ ಯೋಚಿಸಿದ್ದೆ. ಅದಕ್ಕಾಗಿ ಉಚಿತ ಡಿಜಿಟಲ್ ಮಾರ್ಕೆಟಿಂಗ್ ಕಾರ್ಯಾಗಾರ ಆರಂಭಿಸಿದೆ. ಅದನ್ನು ವಿಸ್ತರಿಸುವ ಬಗ್ಗೆ ಚಿಂತಿಸುವಷ್ಟರಲ್ಲಿ ಕೊರೊನಾ ಶುರುವಾಯಿತು. ಅದಕ್ಕೂ ಮುನ್ನ ಕೆಲಸ ಬಿಟ್ಟಿದ್ದೆ. ಅಷ್ಟರಲ್ಲಿ ತಿಂಗಳಿಗೆ 40 ಸಾವಿರದಷ್ಟು ಹಣವನ್ನು ಗಳಿಸುವ ಮಾರ್ಗ ಕಂಡುಕೊಂಡಿದ್ದೆ. ಬಿಡುವಿನ ಸಮಯವನ್ನು ವ್ಯಯ ಮಾಡಿದರೂ ಸಾಕಿತ್ತು. ಸಮಯ ಎಷ್ಟು ವ್ಯಯ ಮಾಡುತ್ತೇವೆ ಎನ್ನುವುದಕ್ಕಿಂತ ಬುದ್ಧಿವಂತಿಕೆಯನ್ನು ಹೇಗೆ ಬಳಸುತ್ತೇವೆ ಎನ್ನುವುದು ಇಲ್ಲಿ ಮುಖ್ಯ. ಎಂಟು ಗಂಟೆ ದುಡಿಯುತ್ತೇನೆ, ಸಂಬಳ ಇಷ್ಟು ಎನ್ನುವ ಹಾಗಿಲ್ಲ. ಸಮಯಕ್ಕಿಂತ ಫಲಿತಾಂಶ ಅಷ್ಟೇ ಲೆಕ್ಕಕ್ಕೆ ಬರುತ್ತದೆ. ನಾನು ಈ ಉದ್ಯಮವನ್ನು ಆರೇಳು ಮಂದಿ ಹತ್ತಿರ ಕಲಿತೆ. ಆದರೂ ಸ್ಪಷ್ಟತೆ ಮೂಡಲಿಲ್ಲ. ನಾನು ಮಾಡುವ ಕೆಲಸಕ್ಕೆ ಎಷ್ಟು ಶುಲ್ಕ ತೆಗೆದುಕೊಳ್ಳಬೇಕು ಎಂದು ಯಾರೂ ಹೇಳಲಿಲ್ಲ. ಇದನ್ನು ಕಲಿಸುವ ಕನ್ನಡಿಗರೂ ಸಿಗಲಿಲ್ಲ. ಬಹುತೇಕರು ಕೋಡಿಂಗ್ ಗೊತ್ತಿರಬೇಕು, ಕಂಪ್ಯೂಟರ್ ತಿಳಿದಿರಬೇಕು ಎಂದೇ ಭಾವಿಸುತ್ತಾರೆ. ಆನ್‌ಲೈನ್ ಮಾರ್ಕೆಟಿಂಗ್ ಮಾಡಲು ಐದನೇ ತರಗತಿ ಓದಿದರೂ ಆಗುತ್ತದೆ. ಮಡಿಕೆ ಮಾಡುವ ಕುಂಬಾರನಿಗೆ ಯಾವುದೇ ವಿವಿಯ ಪದವಿ ಹೇಗೆ ಬೇಕಿಲ್ಲವೋ ಹಾಗೆ. ಓದದಿದ್ದರೂ, ಕೌಶಲ್ಯ ಇದ್ದರೆ ಸಾಕು. ತಾಂತ್ರಿಕವಾಗಿ ಲ್ಯಾಪ್‌ಟಾಪ್ ಬಳಕೆ ಕಲಿತರೆ ಆಯಿತು.

ನಾನೂ ವಿಶ್ವವನ್ನೇ ಟಾರ್ಗೆಟ್ ಮಾಡಿ ಇಂಗ್ಲಿಷ್‌ನಲ್ಲಿ ತರಬೇತುದಾರ ಆಗಬಹುದಿತ್ತು. ಆದರೆ, ಕನ್ನಡದಲ್ಲಿ ಕಡಿಮೆ ಓದಿದವರನ್ನು ಆರಿಸಿಕೊಂಡೆ. ಕನ್ನಡಿಗರಿಗೆ ಕಲಿಸಲು ಆರಂಭಿಸಿದೆ. ಆಗ 'ನಿನಗೆ ಜನ ಸಿಗಲ್ಲ, ದುಡ್ಡು ಬರಲ್ಲ' ಎಂದು ಜನ ಬುದ್ಧಿಮಾತು ಹೇಳಿದರು. ತರಬೇತಿಯ